12ನೇ ವಿಧಾನಸಭೆ 5ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1146(1345)
ಸದಸ್ಯರ ಹೆಸರು : ಪಾಟೀಲ್ ಎಸ್.ಎಸ್.(ಮುಂಡರಗಿ)
ಉತ್ತರಿಸಬೇಕಾದ ಸಚಿವರು : ಶ್ರೀ ಹೆಚ್.ಡಿ.ರೇವಣ್ಣ ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಗದಗ ತಾಲ್ಲೂಕು ಅಡವಿ ಸೋಮಾಪುರದ ರಾಷ್ಟ್ರೀಯ ಹೆದ್ದಾರಿ ಸಂ.63 ರಿಂದ ಮುಂಡರಗಿ–ಹಡಗಲಿ–ಕೊಟ್ಟೂರು–ಜಗಳೂರು ಮಾರ್ಗವಾಗಿ ರಾಷ್ಟ್ರೀಯ ಹೆದ್ದಾರಿ ನಂ.13ಕ್ಕೆ ಹೋಗುವ ರಸ್ತೆಯನ್ನು ಹೆದ್ದಾರಿಯಾಗಿ ಮಾರ್ಪಡಿಸಲು ಕ್ರಮ ಕೈಗೊಳ್ಳಲಾಗಿದೆಯೆ;

ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಆ) ಹಾಗಿಲ್ಲದಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು

ಉದ್ಭವಿಸುವುದಿಲ್ಲ.

ಇ) ಈ ಎರಡೂ ಹೆದ್ದಾರಿಗಳ ನಡುವಿನ ಅಂತರವೆಷ್ಟು;

ಉದ್ಭವಿಸುವುದಿಲ್ಲ.

ಈ) ಇದನ್ನು ಹೆದ್ದಾರಿಯನ್ನಾಗಿ ಮಾಡುವುದರಿಂದ ಆಗುವ ಅಂದಾಜು ಮೊತ್ತವೆಷ್ಟು; (ವಿವರ ನೀಡುವುದು)?

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1147(1346)
ಸದಸ್ಯರ ಹೆಸರು : ಶ್ರೀ ಎಸ್.ಎಸ್.ಪಾಟೀಲ್(ಮುಂಡರಗಿ)
ಉತ್ತರಿಸುವ ಸಚಿವರು : ಶ್ರೀ. ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಅನುಕಂಪದ ಆಧಾರದ ಮೇಲೆ ನೌಕರಿ ಕೊಡಲು ಕಾಯ್ದೆಯಲ್ಲಿ ಅವಕಾಶವಿದೆಯೇ:

ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಾವಳಿ 1996 ರನ್ವಯ ಸೇವೆಯಲ್ಲಿದ್ದಾಗ ಮೃತರಾದ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿ ನೀಡಲು, ಆಸ್ಪದವಿದೆ.

ಆ) ಅನುಕಂಪದ ಆಧಾರದ ಮೇಲೆ ನೌಕರಿ ಕೇಳಿ ಬಂದ ಅರ್ಜಿಗಳೆಷ್ಟು; ಇದರಲ್ಲಿ ಎಷ್ಟು ಜನರಿಗೆ ನೌಕರಿ ಕೊಡಲಾಗಿದೆ ಅರ್ಜಿವಾರು ಮತ್ತು ಇಲಾಖಾವಾರು ವಿವರ ನೀಡುವುದು;

ಕಳೆದ 4 ವರ್ಷಗಳ ಅವಧಿಯಲ್ಲಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ: 8453;

ನೌಕರಿ ನೀಡಿರುವ ಸಂಖ್ಯೆ: 6504; ಬಾಕಿ ಇರುವ ಅರ್ಜಿಗಳ ಸಂಖ್ಯೆ :1949.

ಇ) ಚಿಕ್ಕ ಮಗು ಇದ್ದರೆ ಈ ಹಿಂದೆ ಇದ್ದಂತೆ ಆತ ವಯಸ್ಸಿಗೆ ಬಂದ ಒಂದು ವರ್ಷದಲ್ಲಿ ಅರ್ಜಿ ಹಾಕಿಕೊಂಡರೆ ನೌಕರಿ ಕೊಡುತ್ತಿದ್ದುದ್ದನ್ನು ಈಗ ನಿಲ್ಲಿಸಿರುವುದಕ್ಕೆ ಕಾರಣಗಳೇನು;

ಮೃತ ನೌಕರರ ಅವಲಂಬಿತರು ಅಪ್ರಾಪ್ತ ವಯಸ್ಕರಾಗಿದ್ದ ಸಂದರ್ಭದಲ್ಲಿ ಅವರು ಪ್ರಾಪ್ತ ವಯಸ್ಕರಾದ ನಂತರ ಒಂದು ವರ್ಷದ ಅವಧಿಯೊಳಗೆ ಅರ್ಜಿಯನ್ನು ಸಲ್ಲಿಸಲು ಮೇಲ್ಕಂಡ ನಿಯಮಾವಳಿಯಲ್ಲಿ ಅವಕಾಶವಿತ್ತು. ಈ ನಿಯಮಾವಳಿಯಲ್ಲಿನ ಕೆಲವು ನಿಯಮಗಳನ್ನು ಪ್ರಶ್ನಿಸಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ 6-1-1997 ರಂದು ನೀಡಿರುವ ತನ್ನ ಆದೇಶದಲ್ಲಿ ಅಪ್ರಾಪ್ತ ವಯಸ್ಕರು ಪ್ರಾಪ್ತ ವಯಸ್ಕರಾದ ನಂತರ ಸಲ್ಲಿಸಿರುವ ಅರ್ಜಿಗಳ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ನೀಡಿರುವ ನಿರ್ದೇಶನದನ್ವಯ ಮೇಲ್ಕಂಡ ನಿಯಮಗಳಿಗೆ ತಿದ್ದುಪಡಿಯನ್ನು ಮಾಡಲಾಗಿದೆ. ಈ ತಿದ್ದುಪಡಿಯನ್ವಯ ಮೃತ ನೌಕರನ ಅವಲಂಬಿತರು ನೌಕರನು ಮೃತನಾದ ದಿನಾಂಕದಂದು ಅಪ್ರಾಪ್ತ ವಯಸ್ಕರಾಗಿದ್ದಲ್ಲಿ, ಒಂದು ವರ್ಷದೊಳಗೆ ಪ್ರಾಪ್ತ ವಯಸ್ಕರಾಗಬೇಕು ಮತ್ತು ಆನಂತರ ಒಂದು ವರ್ಷದೊಳಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಅರ್ಜಿ ಸಲ್ಲಿಸಬೇಕು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1153(1509)
ಸದಸ್ಯರ ಹೆಸರು : ಶ್ರಿ. ರಾಜೇಂದ್ರನ್.ಎಸ್.(ಕೆ.ಜಿ.ಎಫ್)
ಉತ್ತರಿಸುವವರು : ಶ್ರೀ. ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

1) ಕೆ.ಜಿ.ಎಫ್. ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಸರ್ವೇಕ್ಷಣಾ ಕಾರ್ಯವನ್ನು ಯಾವಾಗ ವಹಿಸಲಾಯಿತು?

ಕೆ.ಜಿ.ಎಫ್. ಪಟ್ಟಣದ ಮುನಿಸಿಪಲ್ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಸರ್ವೆ ಕಾರ್ಯವನ್ನು ದಿನಾಂಕ: 3.10.06 ರಂದು ವಹಿಸಲಾಗಿತ್ತು.

2) ಸದರಿ ಸರ್ವೆ ಕಾರ್ಯವು ಪೂರ್ಣಗೊಂಡಿದೆಯೇ ಅಥವಾ ಇಲ್ಲವೇ?

2007ರ ಮಾರ್ಚ್ ಮೊದಲ ವಾರದಲ್ಲಿ ಪೂರ್ಣಗೊಂಡಿರುತ್ತದೆ.

3) ಪೂರ್ಣಗೊಂಡಿದ್ದಲ್ಲಿ ಈ ಸರ್ವೇಕ್ಷಣಾ ವರದಿಯನ್ನು ಸರ್ಕಾರವು ಸ್ವೀಕರಿಸಿದೆಯೇ?